ರಾಜ್ಯದ ಗೃಹ ರಕ್ಷಕದಳ ಮತ್ತು ಪೋಲೀಸರಿಗೆ ನೀಡುವ ಸಮವಸ್ತ್ರಗಳು.

2241 ಎ - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ರಾಜ್ಯ ಸಚಿವರು, ಬಂದೀಖಾನೆ ಮತ್ತು ಗೃಹರಕ್ಷಕ ದಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹ ರಕ್ಷಕ ದಳ ಮತ್ತು ಪೋಲೀಸ್ ಸಿಬ್ಬಂದಿಗೆ ನೀಡುವ ಸಮವಸ್ತ್ರಗಳ ಗುಣಮಟ್ಟ ಕಡಿಮೆಯದ್ದಾಗಿರುವುದು ತಿಳಿದಿದೆಯೆ?

ಆ) ಒಳ್ಳೆಯ ಗುಣ ಮಟ್ಟದ ಸಮವಸ್ತ್ರಗಳನ್ನು ನೀಡುವ ವ್ಯವಸ್ಥೆ ಮಾಡುವಿರಾ?

ಶ್ರೀ ಡಿ.ಕೆ. ಶಿವಕುಮಾರ್ (ಬಂದೀಖಾನೆ ಮತ್ತು ಗೃಹರಕ್ಷಕದಳ ರಾಜ್ಯ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

i) ವಿಷಯ : ಪ್ರಶ್ನೋತ್ತರ ವೇಳೆಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಸಮಾನಾವಕಾಶ ದೊರೆಯುವ ಬಗ್ಗೆ.

ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರದ ಅವಧಿಯಲ್ಲಿ ಪಟ್ಟಿಯಲ್ಲಿನ ಎಲ್ಲಾ ಪ್ರಶ್ನೆಗಳಿಗೆ ಅವಕಾಶ ದೊರೆಯತಕ್ಕಂತಹ ವ್ಯವಸ್ಥೆಯನ್ನಾದರೂ ಮಾಡಬೇಕು. ಇಲ್ಲದೇ ಹೋದರೆ ಎಷ್ಟು ಪ್ರಶ್ನೆಗಳಿಗೆ ಅವಕಾಶ ಕೊಡಲಿಕ್ಕೆ ಸಾಧ್ಯವಿದ ಅಷ್ಟೇ ಪ್ರಶ್ನೆಗಳು ಇಲ್ಲಿ ಬರುವಂತೆ ಮಾಡಬೇಕು. ಏಕೆಂದರೆ ಮೊದಲು ಬಂದಂತಹ ಪ್ರಶ್ನೆಗಳಿಗೆ ಹೆಚ್ಚು ಅವಧಿ ಕೊಟ್ಟು ಕೊನೆಯ ಪ್ರಶ್ನೆಗಳಿಗೆ ಅವಧಿ ಸಿಗದಂತೆ ಮಾಡುವುದು ಅಷ್ಟು ಸಮಂಜಸವಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದು ಅಷ್ಟು ಸಮಂಜಸವಲ್ಲ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಪ್ರಶ್ನೆಗಳು ಬರುವುದೇ ಲಾಟರಿಯಲ್ಲಿ. ನಮಗೆ ಕರ್ನಾಟಕ ರಾಜ್ಯದ ಲಾಟರಿಯಲ್ಲಿ ಬರದೇ ಇದ್ದರೂ ಕೊನೆಯ ಪಕ್ಷ ಪ್ರಶ್ನೆಗಳಲ್ಲಾದರೂ ಲಾಟರಿಯಲ್ಲಿ ಒಂದೊಂದು ಪ್ರಶ್ನೆ ಬರುತ್ತದೆ. ಆದರೆ ಅದಕ್ಕೂ ನಮಗೆ ಅದೃಷ್ಟ ಇಲ್ಲವೆಂದರೆ ಹೇಗೆ? ನಿನ್ನೆಯೂ ನನ್ನ ಪ್ರಶ್ನೆ ಹೋಯಿತು, ಇವತ್ತು ನನ್ನ ಪ್ರಶ್ನೆ ಹೋಯಿತು.

ಅಧ್ಯಕ್ಷರು : ನೀವು ಅದೃಷ್ಟ ಲಕ್ಷ್ಮಿಯನ್ನು ಒಲಿಸಿಕೊಳ್ಳುವುದಕ್ಕೆ ತಪಸ್ಸು ಮಾಡಬೇಕು.

ಶ್ರೀಮತಿ ಮೋಟಮ್ಮ : ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಎಷ್ಟು ವರ್ಷ ತಪಸ್ಸು ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು : ನನ್ನ ಪ್ರಶ್ನೆಗೆ ಉತ್ತರವೇ ಸಿಕ್ಕಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ಅನೇಕ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುತ್ತಿಲ್ಲ. ನಾನು ಕಳೆದ ಅಧಿವೇಶನದಲ್ಲಿ ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಇದರ ಬಗ್ಗೆ ತಾವು ವಿಚಾರ ಮಾಡಬೇಕು.

ಅಧ್ಯಕ್ಷರು : ಆಗಬಹುದು

ಶ್ರೀ ಷಫಿ ಅಹಮದ್ : ಕಳೆದ ಸಾರಿ ಕೇಳಿದ ಅನೇಕ ಪ್ರಶ್ನೆಗಳಿಗೆ ನಮಗೆ ಉತ್ತರ ಬಂದಿಲ್ಲ. ಲಗತ್ತಿಸಿರುತ್ತದೆಂದು ಹೇಳುತ್ತಾರೆ. ಆದರೂ ಉತ್ತರ ಬಂದಿರುವುದಿಲ್ಲ. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಕಳೆದ ಸಾರಿ ಡೆಫರ್ ಆದಂತಹ ಪ್ರಶ್ನೆಗಳಿಗೂ ಕೂಡ ಉತ್ತರ ಸಿಕ್ಕಿಲ್ಲ.

ಅಧ್ಯಕ್ಷರು : ಆಗಬಹುದು.

ಶ್ರೀ ಯು.ಕೆ. ಶಾಮಣ್ಣ : ನಾವು ಪ್ರಶ್ನೆಗಳನ್ನು ಕೇಳಿದರೆ ಅವುಗಳಿಗೆ ಉತ್ತರಗಳು ಬರುತ್ತಿಲ್ಲ. ಇನ್ನು ಕೆಲವೊಮ್ಮೆ ಪ್ರಶ್ನೆಗಳೇ ಇಲ್ಲಿ ಬರುವುದಿಲ್ಲ. ಯಾವ ರೀತಿಯಿಂದ ಲಾಟರಿಯನ್ನು ಮಾಡುತ್ತಾರೆಂದು ಸ್ವಲ್ಪ ವಿಚಾರ ಮಾಡಬೇಕು.

ಅಧ್ಯಕ್ಷರು : ಪ್ರತಿ ದಿವಸ ಮುಂದಿನ ವಾರದ ಪ್ರಶ್ನೆಗಳಿಗೆ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ನೋಟೀಸ್ ಆಫೀಸಿನಲ್ಲಿ ಡ್ರಾ ನಡೆಯುತ್ತದೆ ಎಲ್ಲಾ ಸದಸ್ಯರು ಡ್ರಾ ನಡೆಯತಕ್ಕಂತಹ ಕಾಲದಲ್ಲಿ ಹೋಗಿ ನೋಡಬಹುದು. ಅದನ್ನು ನನ್ನ ಮುಂದೆ ಹೇಳಿದರೆ ಏನೂ ಪ್ರಯೋಜನವಾಗುವುದಿಲ್ಲ.

ii) ವಿಷಯ : ತುಮಕೂರು ರಸ್ತೆಯಲ್ಲಿ ಮ್ಯಾಕ್‌ಡೆವೆಲ್ ವಿಸ್ಕಿ ಸಾಗಿಸುತ್ತಿದ್ದ 13 ಲಾರಿಗಳಿಂದ 35 ಲಕ್ಷ ರೂಪಾಯಿ ತೆರಿಗೆ ವಂಚನೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ ನಿನ್ನೆ ದಿನ ರಾತ್ರಿ 11.30ಕ್ಕೆ ನಾವು ನಾಲ್ವರು ಶಾಸಕರು ತುಮಕೂರು ರಸ್ತೆಯಲ್ಲಿರುವ ಸೇಲ್ಸ್ ಟ್ಯಾಕ್ಸ್ ಗೇಟ್ ಹತ್ತಿರ ಹೋಗಿದ್ದೆವು. ಎರಡು ದಿವಸದಿಂದ ಸುಮಾರು 35 ಲಕ್ಷ ರೂಪಾಯಿಗಳ ತೆರಿಗೆ ವಂಚನೆಯಾಗುತ್ತಿರತಕ್ಕಂತಹ ಒಂದು ಪ್ರಕರಣ ಇಲ್ಲಿ ಆಗಿದೆ.

ಅಧ್ಯಕ್ಷರು : ಬರೆದು ಕಳಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮ್ಯಾಕ್‌ಡೆವೆಲ್ ವಿಸ್ಕಿ ಇರುವ 13 ಲಾರಿಗಳು ಪೂನಾದಿಂದ ಬಂದಿದೆ. ಅವನ್ನು ಹಿಡಿದಿದ್ದು 2 ದಿವಸದಿಂದ ಹಾಗೇ ಇದೆ. ಅದು ಸುಮಾರು 35 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಇದರ ಬಗ್ಗೆ ತನಿಖೆ ಮಾಡಬೇಕು.

ಅಧ್ಯಕ್ಷರು : ಆ ವಿಚಾರವನ್ನು ನನ್ನ ಗಮನಕ್ಕೆ ತಂದು ಹೇಳಿದೀರಾ? ಇಂತಹ ವಿಚಾರಗಳನ್ನು ಇಲ್ಲಿ ತರುವಂತಹ ನಿಮ್ಮ ಉದ್ದೇಶ ನಮಗೆ ಅರ್ಥವಾಗುತ್ತದೆ. ಇಂತಹ ವಿಚಾರಗಳು ಬಂದಾಗ ಪೂರ್ವಭಾವಿಯಾಗಿ ನನ್ನನ್ನು ಕಂಡು ಮೊದಲೇ ಹೇಳಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಗೊತ್ತಾಯಿತು. ಇದು 65 ಲಕ್ಷ ರೂಪಾಯಿ ಬೆಲೆ ಬಾಳುವಂಥಾದ್ದು ಇದೆ. 35 ಲಕ್ಷ ರೂಪಾಯಿಗಳ ತೆರಿಗೆ ವಂಚನೆಯಾಗುತ್ತಿದೆ. ಮಾನ್ಯ ಎಕ್ಸೈಸ್ ಮಂತ್ರಿಗಳು ಇದ್ದಾರೆ. ಆ ಲಾರಿಗಳಿಗೆ ಟ್ರಾನ್ಸಿಟ್ ಪಾಸ್ ಕೊಡಿಸಿ ಮೋಸ ಮಾಡುವಂಥಾದ್ದು ನಡೆಯುತ್ತಿದೆ. ತುಮಕೂರು ರೋಡಿನಲ್ಲಿ 13 ಲಾರಿಗಳನ್ನು ಹಿಡಿದಿಟ್ಟಿದ್ದಾರೆ. ಅವುಗಳಲ್ಲಿ ಮ್ಯಾಕ್‌ಡೆವೆಲ್ ವಿಸ್ಕಿ ಇದೆ. ಅದು 65 ಲಕ್ಷ ರೂಪಾಯಿ ಬೆಲೆ ಬಾಳುವಂಥಾದ್ದು. ಇದರಿಂದ 35 ಲಕ್ಷ ರೂಪಾಯಿ ತೆರಿಗೆ ಹಾಳಾಗುತ್ತಿದೆ.

ಶ್ರೀ ಧರ್ಮಸಿಂಗ್ : ತುಮಕೂರು ರಸ್ತೆಯಲ್ಲಿ ಲಾರಿಗಳನ್ನು ಹಿಡಿದಿರತಕ್ಕಂಥಾದ್ದು ನನ್ನ ಗಮನಕ್ಕೂ ಬಂದಿದೆ. ಅದನ್ನು ಬಿಡಲಿಕ್ಕೆ ಹೋಗಿಲ್ಲ. ಕ್ರಮ ತೆಗೆದುಕೊಂಡಿದ್ದೇವೆ. ಹಿಡಿದು ಸೀಜ್ ಮಾಡಿದ್ದೇವೆ.